# ಪ್ರಸಂಗ ಸಾಹಿತ್ಯ

**ಭಾಮಿನಿ**
ಬನ್ನಗೊಂಡಿಹ ಲೋಕಲೋಕವ |
ಕಣ್ಣನೀರಿಂ ತಣಿಸಿ ನಲಿಸಿದ |
ಚೆನ್ನೆ ಶ್ರೀ ದುರ್ಗಾಂಬೆ ದುರ್ಗಮವಳಿಸಿ ಪಾಲಿಸಿದ ||
ಮನ್ನಣೆಯ ಸತ್ಕಥೆಯ ಕಾವ್ಯದ |
ಕಣ್ಣೆಯಲಿ ಕಟ್ಟುವೆ ಕಲಾಧರ |
ರುನ್ನತಿಯನಿತ್ತಿದನು ಮೆರೆಸಲಿ ಮರೆಸಿ ದೋಷಗಳ ||

**ಭಾಮಿನಿ**
ಆಳುತೀರ್ದನು ದೈತ್ಯ ಕುಲಮಣಿ |
ಕಾಳಗದ ಕಟ್ಟಾಳು ರುರುಸುತ |
ಮೂಲದೊಳಗೆ ಹಿರಣ್ಯ ನೇತ್ರನ ಕುಲಜ ಕ್ರವ್ಯಾಧ ||
ಓಲಯಿಸೆ ಧೂಮ್ರಾಕ್ಷ ದುರ್ಜಯ |
ರೂಳಿಗದ ಸೇನಾನಿ ಮಂತ್ರಿಗ |
ಳೋಲಗಕ್ಕೈತಂದನಾ ಖಳ ಶೋಣಿತಾಪುರದಿ || 1 || 1 ||

**ಸೌರಾಷ್ಟ್ರ - ತ್ರಿವುಡೆ**
ದೈತ್ಯ ದುರ್ಗಮನಿತ್ತನೋಲಗ |
ಸತ್ವ ಬಲಯುತ ವೀರ ದಾನವ |
ಮೊತ್ತಮಂ ಕೂಡುತ್ತ ಶೋಣಿತ | ಪತ್ತನದಲಿ || 1 ||
ಕರೆಸಿದನು ತನ್ನಾಪ್ತ ಭಟರನು |
ಭರದಿ ಬಂದಾ ಧೂಮ್ರಲೋಚನ |
ದುರುಳ ದುರ್ಜಯರೆರಗಿ ಕೇಳ್ದರು | ಕರೆದುದೇನು || 2 ||
ದನುಜಪತಿ ತನ್ನವರ ನೋಡುತ |
ಲನುನಯದೊಳುಪಚರಿಸಿ ಯೋಗ್ಯಾ |
ಸನವನೀಯುತ ಮತ್ತೆ ಪೇಳಿದ | ಮನದ ಮಾತ || 3 || 4 ||

**ಕೇದಾರಗೌಳ - ಝಂಪೆ**
ಆಲಿಸಿರಿ ದೈತ್ಯವರರೆ | ಸತ್ವದಿಂ |
ದಾಳುತಿಹೆ ನಾನೀ ಧರೆ ||
ಕಾಳಗದಿ ನಿಮ್ಮೃಧಟಿಗೆ | ಬುದ್ಧಿಯನು |
ಕಾಲ ಪೇಳ್ವನು ಕಾಲಿಗೆ || 1 ||
ಸಾಧಿಸಲು ಸ್ವರ್ಗವನ್ನು | ಹರಿ ಬಂದು |
ಬಾಧಿಸುವನೆಂಬಿರೇನು ||
ಸಾಧಕರು ನಾವಾಗಲು | ಏಂ ಗಯ್ಯುವ |
ರಾದಿವಿಜಸಿರಿಯ ಗೆಲಲು || 2 || 6 ||

**ಮಾರವಿ - ಏಕ**
ಕೊಡು ಕೊಡು ನೇಮವ |
ದಡಿಗ ದಿವೌಕಸ |
ಗಡಣವ ಕಡಿದೊರಸಿ ||
ಕೊಡಿಸುವೆ ಬಿಡುಗ |
ಣ್ಣೊಡೆಯನ ಬಿಡದಿಯ |
ಬಡಿವಾರವ ಬಿಡಿಸಿ || 1 || 7 ||

**ಭೈರವಿ - ಏಕ**
ಹೂಂಕರಿಸುತ ಧೂಮ್ರಾಕ್ಷ | ನೇ |
ಮಂ ಕೊಡು ನಾನಿಹೆ ದಕ್ಷ ||
ಸಂಕಟಕಿಕ್ಕುವೆ ಸುರರ | ಗೋ |
ಳಂ ಕೊಡೆ ಗೆಯ್ಯುವೆ ಬವರ || 1 || 8 ||

**ತುಜಾವಂತು - ಏಕ**

ಭಲರೇ | ಬಾಹು | ಬಲರೆ || ಪ ||
ಬಲವು ನಿಮ್ಮೊಳಿಹುದು ನಿಜವು |
ಬಲವಿರೋಧಿಯನ್ನು ಗೆಲಲು ||
ತಳುವದೊಂದುಪಾಯವನ್ನು |
ಗೆಯ್ಯುವದು || ಸತ್ಯವೀರ್ಪುದು || 1 ||
ಯಾಗ ಯಜ್ಞದಿಂದ ಸುರರು |
ಬೀಗುತಿಹರು ವಿಪ್ರರಿಂದ |
ಪೋಗಿ ವಿಧಿಯ ಮೆಚ್ಚಿಸುವೆನು |
ಸೆಳೆಯುವೆ | ವೇದ | ತಿಳಿಯುವೆ || 2 || 10 ||

**ವಾರ್ಧಕ**

ವೇದಮಂ ಪಡೆಯುವರೆ ಬೇದ ಬಿಜ್ಜಗನ ಕುರಿ |
ತಾದ್ಯೈತ್ಯನಾರಣ್ಯಕೈದಿ ತಪಮಂಗೆಯ್ದು |
ನಾಧರಿಸಿ ಯೋಗದಿಂ ತ್ಯಾಗದಿಂ ತೊರೆದತುಲ ಭೋಗಮಂ ನೀಗುತವನು ||
ಸಾಧಿಸಿದ ಪರ್ಣ ಜಲ ಪವನದಾಹಾರಮಂ |
ಭೇದಿಸಿತು ಬಾಧಿಸಿತು ತಪದುರಿಯು ಲೋಕಮಂ |
ಸಾಧಕನ ಮನದ ಕರೆಗೈತಂದು ಮೈದೋರ್ದ ಕಮಲಾಸನಂ ಮೆಚ್ಚುತ || 1 || 11 ||

**ಸುರುಟಿ – ಆದಿ**

ಭಕ್ತನೆ ಮೆಚ್ಚಿದನು | ಸಿದ್ಧಿಯ |
ಶಕ್ತಿಗೆ ಹೆಚ್ಚಿದೆನು ||
ಸಕ್ತಿಯ ಪೇಳ್ ನೀನು | ಕೊಡಲು |
ದ್ಯುಕ್ತನು ತಾನಿಹೆನು || 1 || 12 ||

**ನವರೋಜು - ಆದಿ**

ನೋಡಿದನಾಕ್ಷಣ ವಿಧಿಯ | ಒಳ |
ಗಾಡಿದ ಸಿದ್ಧಿಯ ನಿಧಿಯ ||
ಹೂಡುತ ರೂಢಿಯೊಳ್ ತನುವ | ಕೊಂ |
ಡಾಡಿದ ಬೇಡಿದ ವಿಭುವ || 1 ||
ವೇದದ ಶಕ್ತಿಯ ನೀಡು | ಬಲು |
ಮೋದದಿ ಕೈವಶ ಮಾಡು ||
ಸಾಧಕನಾಗಲು ಬಲವ | ವಾ |
ಣೀಧವ ನೀಡೈ ಗೆಲುವ || 2 || 14 ||

**ಭಾಮಿನಿ**

ಇತ್ತೆ ನಿನಗೊಲಿದೀವರವ ಕೇಳ್ |
ಮೃತ್ಯುಧರ್ಮವ ಮೀರೆ ತಿಳಿದಿರು |
ನಿತ್ಯ ವೇದವಪೌರಷೇಯವು ಧಾರ್ಮಿಕಗೆ ಬದುಕು ||
ಎತ್ತುವುದು ಮರೆಯದಿರು ನಿಷ್ಠೆಯು |
ಕುತ್ತು ನಿರನುಷ್ಠಾನರಿಂಗಿದು |
ಹೊತ್ತು ನಡೆ ನಡೆ ಸರಿಯಿರಲು ಶುಭವಕ್ಕೆನುತ ನಡೆದ || 1 || 15 ||

**ಪಂತುವರಾಳಿ - ರೂಪಕ**

ತೋಷವಾಂತು ದುರ್ಗಮಾಸುರ | ತನ್ನ ಮನದ |
ಆಸೆ ಪೂರ್ಣಗೊಳಲು ಕಾತರ ||
ಘಾಸಿಗೊಳಿಪೆ ಲೋಕ ಲೋಕ |
ವೀಸಮರ್ಥಗೊಲಿಯಿತೆಂದು |
ಸೂಸಿ ನಗೆಯೊಳುಬ್ಬಿ ಸುರರ |
ನಾಶಗೊಳಿಪೆನೆನುತ ಬಂದ || 1 ||
ಮಿತ್ರ ಪಡೆಯ ಕೂಡಿ ವನವನು | ಪೊಕ್ಕು ಬಡಿದ |
ಸತ್ರಗೈಯ್ಯುವಾಶ್ರಮಗಳನು ||
ಚಿತ್ರ ಹಿಂಸೆ ನೀಡಿ ನಿಮ್ಮ |
ಗೋತ್ರದವರ ತೋರಿರೆಂದು |
ಒತ್ತಿ ಕುತ್ತಿ ಸೆರೆಯ ಪಿಡಿದು |
ಮೃತ್ಯುಮುಖರು ಸುತ್ತುತಿರಲು || 2 || 17 ||

**ಮಧುಮಾಧವಿ - ತ್ರಿವುಡೆ**
ಮರೆತರೆಲ್ಲರು ವೇದ ವಿದ್ಯೆಯ |
ತಿರೆಯ ನಿತ್ಯಾಚಾರ ನಿಯಮವ |
ಧರೆಯಮರರಿಂದಳಿದು ಪೋದುದು |
ಪರಮ ತೇಜವು ಪುಣ್ಯವು || 1 ||
ಯಾಗ ಯಜ್ಞ ವಿಯೋಗದಿಂದಲಿ |
ಭೋಗಿಗಳು ಸುರರಳಲೆ ಮೂಜಗ |
ಕಾಗಲತಿ ಸಂಕಷ್ಟ ನೀಗಲು |
ಯೋಗ ಸಂಸ್ಕೃತಿ ಸತ್ಯವು || 2 || 19 ||

[ದುರ್ಗಮಾಸುರ ಮತ್ತು ಆತನ ಅನುಚರರು ಆಶ್ರಮಗಳ ಮೇಲೆ ದಾಳಿ ಮಾಡುವುದು, ನಾಶಗೊಳಿಸುವ ದೃಶ್ಯಗಳನ್ನು ಕೇವಲ ವಾದನಗಳಿಂದ ನಡೆಸಿ - ರಂಗಕ್ರಿಯೆಯಾಗಿ ತೋರಿದರೆ ಸಾಕು. ದೇವತೆಗಳೊಂದಿಗೆ ಪ್ರತ್ಯೇಕ ಯುದ್ಧವನ್ನು ಸೇರಿಸಿಲ್ಲ. ನೂರಾರು ಕಥೆಯ ಕ್ಲೀಷೆಯನ್ನು ಬದಲಾಯಿಸಲಿಕ್ಕಾಗಿ ಹೀಗೆ ಮಾಡಿದೆ]

**ತುಜಾವಂತು - ಝಂಪೆ**
ಅಟ್ಟಿದರು ಮೆಟ್ಟಿದರು ಕುಟ್ಟಿದರು ಗಡ್ಡಮಂ |
ಸುಟ್ಟರಾಶ್ರಮದ ಋಷಿಗಳನೆಳೆದು ಕೆಡಹಿ ||
ಕೆಟ್ಟೋಡುವವರ ಕೈಯ್ಯ ಕಟ್ಟಿದರು ಗಹಗಹಿಸು |
ತಟ್ಟಹಾಸಂಗೈದು ಕೆಟ್ಟನುಡಿದೊಟ್ಟಿ || 1 ||
ದುರ್ಗಮಾಸುರ ಕೆರಳಿ ಸ್ವರ್ಗಕೈದಲು ಬೆದರಿ |
ನಿರ್ಗಮಿಸಿದರು ಸುರರು ರೂಪ ಮರೆಸಿ ||
ಭೋರ್ಗುಡಿಸಿ ಭೂ ವ್ಯೋಮ ಪಾತಾಳದೊಳು ಜೀವ |
ವರ್ಗಮಂ ಸದೆಬಡಿದು ಹಿಂಸಿಸಿದ ದುರುಳ || 2 || 21 ||

**ಸಾಂಗತ್ಯ - ರೂಪಕ**
ಮಳೆಯಿಲ್ಲ ಬೆಳೆಯಿಲ್ಲದಿಳೆ ಬರಗಾಲದಿಂ |
ದಳಿದುದು ಜೀವ ಜರ್ಝರಿಸೆ ||
ಹೊಳೆ ಕೆರೆ ಕೊಳ ಬಾವಿ ಬತ್ತಲು ಸಸ್ಯ ಸಂ |
ಕುಲನಾಶ ಬೆಂಗಾಡುಗೊಳಿಸೆ || 1 ||
ಋಷಿಗಡಣವು ಸಹ ದೇವರ್ಕಳೊಂದಾಗಿ |
ರಸೆಯುದ್ಧಾರವ ಬಯಸಿ ||
ಬಸವಳಿದೈತಂದು ತುಹಿನಾದ್ರಿಯಲಿ ನಿಂದು |
ಅಸಮಾನ ತೇಜೆಯ ನುತಿಸೆ || 2 ||
ತಾಯೆ ಲೋಕವ ಕಾಯೆ ಮಾಯೆ ಮಹೇಶ್ವರಿ |
ತೋಯಜಾಂಬಕಿಯೆ ತ್ರ್ಯಂಬಕೆಯೆ ||
ಕಾಯ ಕ್ಲೇಶವಿದಲ್ಲ ಮಾಯವಾದುದು ಲೋಕ |
ಸಾಯುತ್ತಲಿದೆ ಜಗವೆಲ್ಲ || 3 || 24 ||

**ಭಾಮಿನಿ**
ಅಂಬಿಕೆಯೆ ರಕ್ಷಿಪುದು ಸತ್ಕ್ರಿಯೆ |
ಗಿಂಬುದೋರೌ ಯಾಗ ಯಜ್ಞದ |
ಹಂಬಲವು ಹಾಳಾಯ್ತು ಮರೆತೆವು ವೇದ ವಿದ್ಯೆಗಳ ||
ತುಂಬಿದಿಳೆ ಬರಡಾಯ್ತು ಭಗವತಿ |
ಸಂಭ್ರಮವು ಸೋತಿಹುದು ನಿನ್ನನು |
ನಂಬಿದೆವು ನಿಗ್ರಹಿಸು ನೀಚರ ಶರಣು ಶರಣಂಬೆ || 1 || 25 ||

**ಮಧ್ಯಮಾವತಿ – ಏಕ - ಆದಿ [ಛಂದೋವತಂಸ]**
ಯತಿ ದೇವ ಗಡಣದ ಸ್ತುತಿಗೆ ಮೈಯಾಗಿ |
ಪತಿತ ಪಾವನೆ ದೇವಿ ಶತನೇತ್ರೆಯಾಗಿ ||
ಶ್ರುತಿ ವಂದ್ಯೆ ಮೈದೋರೆ ದ್ಯುತಿರೂಪಳಾಗಿ |
ಪೃಥುವಿಯುಬ್ಬಿತು ನಭ ನಮಿಸಿತು ಬಾಗಿ || 1 ||
ನೂರು ಕಣ್ಣುಗಳಿಂದ ಚಿಮ್ಮಲು ವಾರಿ |
ಧಾರಿಣಿ ನದಿ ನದ ತುಂಬಲುಕ್ಕೇರಿ ||
ಆರಲು ಧಗೆ ದೋಷ ಜಗವು ತಂಪೇರಿ |
ಮೂರು ಲೋಕಕು ಜಯ ನಗೆಬೀರೆ ಗೌರಿ || 2 || 27 ||

**ಮಧುಮಾಧವಿ - ತ್ರಿವುಡೆ**
ನೊಂದಿರೇ ರಕ್ಕಸರ ಬಾಧೆಗೆ |
ಬೆಂದಿರೇ ಬವಣೆಯಲಿ ಧೈರ್ಯವ |
ಹೊಂದಿರೈ ದುರ್ಗಮನ ದಮನಕೆ |
ಬಂದುದೀಗಲೆ ಕಾಲವು || 1 ||
ನಗುವ ಚೆಲ್ವಿಗೆ ಚಿಮ್ಮ ಚಂದ್ರಿಕೆ |
ಸೊಗದಿ ಸುತ್ತುವ ಚಕ್ರವಾಗಲು |
ಜಗದ ಜೀವಾವರಣ ರಕ್ಷಕಿ |
ದೃಗುಗಳಿಂ ಕಿಡಿ ಹೊತ್ತಿಸೆ || 2 || 29 ||

**ಸೌರಾಷ್ಟ್ರ - ತ್ರಿವುಡೆ**
ಜನಿಸಿದರು ಮಾತೃಕೆಯರಿಬ್ಬರು |
ಧನುಶರವು ಕರವಾಲ ಹಸ್ತದಿ |
ಕಿನಿಸಿನಿಂ ಕಿಡಿಗೆದರಿ ಮಾತೆಗೆ | ಮಣಿದು ನಿಲಲು || 1 ||
ಬರುವ ದುಷ್ಕರ ತರಿದು ಲೋಕವ |
ಪೊರೆವ ಕಾರ್ಯಕೆ ನಿಮ್ಮ ಸೃಜಿಸಿದೆ |
ತಿರುಗುವಗ್ನಿಯ ಚಕ್ರ ಬಾಹ್ಯದೊ | ಳಿರುತ ನೋಡಿ || 2 || 31 ||

**ಕಂದ**
ಧರೆಯಂ ತಂಪೇರಿಸಿ ಭೂ |
ಸುರರಂ ರಕ್ಷಿಸಿದ ದೇವಿ ಗೆಯ್ದೀ ಪರಿಯಂ ||
ಚರರೈತರುತಲಿ ದೊರೆಯಡಿ |
ಗೆರಗುತಲರುಹಿದರು ನಡೆದ ವಾರ್ತೆಯ ಜವದಿಂ || 1 || 32 ||

**ಮುಖಾರಿ - ಏಕ**
ಅಡ್ಡ ಬಿದ್ದೇವು ದೈತ್ಯ ರಾಯ || ಕಂಡೊಂದು ಚೋದ್ಯ ||
ದೊಡ್ಡದಾಗೈತೆ ನೋಡೆಮ್ಮೊಡೆಯ | ಅಡ್ಡ || ಪ ||
ಗುಡ್ಡೆಯ ಬುಡದಲಿ | ದೊಡ್ಡ ಹೊಳೆಯ ದಡ |
ಕೊಡ್ಡಿತು ನೀರ | ನ್ನಡ್ಡಗಿಸಲು ಬರ |
ದಡ್ಡಕೆ ಹಾಯ್ದೆವು | ದೊಡ್ಡ ವಿಚಾರವು || ಅ. ಪ ||
ನದಿಯುದ್ದ ಪೋಗಿ ನೋಡಲಲ್ಲಿ || ಭೂಸುರರು ಸುರರು ||
ಒದಗಿ ಒಂದಾಗಿ ಭಜನೆಯಲ್ಲಿ ||
ತುದಿ ಮೊದಲಿಲ್ಲದೆ | ಗೊದಗೊದಗುಡುತಿರೆ |
ಬೊದ ಬೊದ ಕಣ್ಣೀರುದುರಿಸೆ ಹೆಣ್ಣೊಂ |
ದ್ವಿದರುತ ನಾವಿದ | ನೊದರಲು ಬಂದೆವು || ಅಡ್ಡ || 1 || 33 ||

**ಮಾರವಿ - ಏಕ**
ಕಿಡಿ ಕಿಡಿಯಾಗುತ | ಬಡಿಯಿರಿ ವಿಪ್ರರ ||
ನಡೆಸಿರಿ ಸೇನೆಯನು ||
ಬಿಡುಗಣ್ಣರ ಹುಲು | ಪಡೆ ಮುರಿದಿಕ್ಕಿರಿ |
ಕುಡಿಸಿರಿ ನೀರನ್ನು || 1 || 34 ||

**ಭೈರವಿ - ಏಕ**
ಹೂಂಕರಿಸುತ ದುರ್ಜಯನು | ಬಿಡೆ |
ನಾಂ ಕುತ್ತಿತ ದಿವಿಜರನು ||
ಏಂ ಕಾರಣವೆಂದರಿವೆ | ಬಿಡು |
ಶಂಕೆಯ ದುರ್ಗಮ ಪ್ರಭುವೆ || 1 ||
ಗರ್ಜಿಸುತಲಿ ಧೂಮ್ರಾಕ್ಷ | ಭಯ |
ವರ್ಜಿಸು ಬಿಡೆ ಸುರಪಕ್ಷ ||
ನಿರ್ಜರ ವಿಪ್ರರ ತರಿದು | ತಡೆ |
ವರ್ಜಿತರೆಂತಹರಿಂದು || 2 || 36 ||

**ಭಾಮಿನಿ**
ಪೊರಟುದಾಕ್ಷಣ ದೈತ್ಯ ಸೇನೆಯು |
ಹರಿವ ನದಿಯಂ ಕಂಡು ಗಜರುತ |
ಉರಿಯುವಗ್ನಿಯ ಚಕ್ರದೊಳಗಿಹ ಸುರರ ವಿಪ್ರರ ಕಾಣುತ ||
ಮೊರೆಯುತಾರ್ಭಟಿಸುತ್ತ ಮುತ್ತಲು |
ಪರಿಕಿಸುತ ಮಾತೃಕೆಯರಾಕ್ಷಣ |
ತರಿದು ಸೇನೆಯ ಹೊಕ್ಕುಹೊಯ್ದರು ಕೆರಳಿಯಾರ್ಭಟಿಸಿ || 1 || 37 ||

[ತುಮುಲ ಯುದ್ಧ]

ಮಾತೃಕೆ1 x ಧೂಮ್ರಾಕ್ಷ

**ಭೈರವಿ - ಅಷ್ಟ**
ದುರುಳ ರಕ್ಕಸನೆ ನಿಲ್ಲು | ಲೋಕದ ಸರ್ವ |
ಕರಕಷ್ಟಗೊಳಿಪ ಗುಲ್ಲು ||
ತರಿದು ನಿಮ್ಮನು ಮಾತೆ | ಗುರು ಜಯ ತಂದಿತ್ತು |
ಪೊರೆವೆವು ಸಜ್ಜನರ || 1 ||
ಕ್ಷುದ್ರನಾರಿಯೆ ಭೂತವೊ | ಬಂದೆಯ ನೀ ದ |
ರಿದ್ರ ದಿವಿಜರಾಟವೊ ||
ಛಿದ್ರವಗೊಳಿಸುತು | ಪದ್ರಕಾರಿಗಳಿಂದ |
ಭದ್ರಗೊಳಿಪೆ ದೈತ್ಯನ || 2 || 39 ||

[ಯುದ್ಧ-ಧೂಮ್ರಾಕ್ಷನ ಮರಣ]

ಮಾತೃಕೆ2 x ದುರ್ಜಯ

**ಬೇಗಡೆ - ರೂಪಕ**
ದನುಜ ನಿನ್ನ ಶಿರವನರಿದು |
ಜನನಿಯನ್ನು ಮೆಚ್ಚಿಪೆ ||
ಮನುಜ ದಿವಿಜರನ್ನು ಕಾಯ್ದು |
ವಿನತರನ್ನು ರಕ್ಷಿಪೆ || 1 ||
ಕುಟ್ಟಿ ಹೆಣ್ಣು ಮೂಳಿ ನಿನ್ನ |
ರಟ್ಟೆ ಮುರಿವೆನೀಕ್ಷಣ ||
ದಿಟ್ಟರಾವು ಮೆಟ್ಟಿ ಮುರಿದು |
ಸುಟ್ಟು ಬಿಡುವೆನರೆಕ್ಷಣ || 2 || 41 ||

[ಯುದ್ಧ - ದುರ್ಜಯನ ಮರಣ]

ದೇವಿ x ದುರ್ಗಮ

**ಕೇದಾರಗೌಳ - ಝಂಪೆ**
ಬಲವಳಿದು ಪೋಗಲರಿತು | ದುರ್ಗಮನು |
ಛಲವೇನು ಹೆಂಗುಸಿನಿತು ||
ಕೊಳುಗುಳವ ಗೈಯಲುಂಟೆ | ಮಾಯದಿಂ |
ಗೆಲುವೆ ನಿಲಿಸುವೆನು ತಂಟೆ || 1 ||
ಘೋರ ಮಾಯೆಯ ಸೃಜಿಸಿದ | ಗಾಢಾಂಧ |
ಕಾರ ಕಲು ಮಳೆ ಸುರಿಸಿದ ||
ಕ್ರೂರ ಮೃಗ ದೂಳು ಗಾಳಿ | ಪಸರಿಸಲು |
ಮಾರಿಯಾಕಾರ ತಾಳಿ || 2 || 43 ||

**ವಾರ್ಧಕ**
ಉರಿದೆದ್ದು ಹೂಂಕರಿಸೆ 'ಕಾಲಿಕೆ'ಯು 'ತಾರಿಣಿ'ಯು |
ಭರದಿಂ 'ಭಲಾತ್ರಿಪುರೆ' 'ಭೈರವಿ' 'ರಮಾ' 'ಬಗಳೆ' |
ಪರುಟವಿಸಿ 'ಮಾತಂಗಿ' 'ತ್ರಿಪುರಸುಂದರಿ' 'ತುಲಜೆ' 'ಕಾಮಾಕ್ಷಿ' 'ಗೃಹ ಕಾಲಿ'ಯರ್ ||
ಗುರುಗುಡಿಸಿ 'ಛಿನ್ನ ಮಸ್ತಕೆ' 'ಜಂಬಿನೀ' ದೇವಿ |
ವರ 'ಮೋಹಿನಿ'ಯರಿಂತು ಹದಿನೈದು ಶಕ್ತಿಗಳ್ |
ಧರಣಿ ಕಂಪಿಸುವಂತೆ ಮುತ್ತಿದರ್ ಸುತ್ತಿದರ್ ಮೃತ್ಯುರೂಪದೊಳಸುರನ || 1 || 44 ||

**ಶಂಕರಾಭರಣ - ರೂಪಕ**
ಕ್ರೋಧದಿಂದಲುರಿಯುತಸುರ |
ಸೇದಿ ಕರೆದು ಸರಳ ಮಳೆಯ |
ಕಾದುತಿರ್ದನೆಲ್ಲರೊಡನೆ ವೇದಬಲದಲಿ || 1 ||
ಸೋಲುತಿರಲು ಮಾತೃಕೆಯರು |
ಕಾಲರುದ್ರನಂತೆ ದೇವಿ |
ಶೂಲವನ್ನು ನೆಗಹಿ ಬರುತ | ಖೂಳನಿದಿರಲಿ || 2 ||
ಎಲವೊ ದುರುಳ ಬಂತು ನಿನಗೆ |
ಅಳಿವ ಕಾಲ ವರದ ಬಲದಿ |
ಇಳೆಯಗೋಳುಗುಡಿಸುವುದನು | ನಿಲಿಸಿ ರಕ್ಷಿಪೆ || 3 || 47 ||

**ಮಾರವಿ - ಏಕ**
ಲಲನೆಯೆ ನಿನ್ನೊಳು ಕಲಹವದೇಂಘನ |
ಛಲ ಬಲವೇನರಿವೆ ||
ಇಳೆಯಮರರ ಬರ್ದಿಲರೀ ಕುಹಕವ |
ನಿಲಿಸುವೆನೀ ಕ್ಷಣವೆ || 1 ||
ವೇದದ ವರದಿಂ | ಸಾಧಿಸಲಾಗದು |
ಬಾಧಿಸುವುದು ಖಳನೆ ||
ಮೇದಿನಿಭಾರಕ | ಸೇದುವೆ ನಿನ್ನಸು |
ಸಾಧಿಸಿ ವಿಜಯವನೆ || 2 ||
ಅರರೇ ತರುಣಿಯೆ | ಧರೆಮೂರೊಡೆಯನು |
ಸುರರೆನ್ನಡಿಯಾಳು ||
ತೆರಳೀಕ್ಷಣ ಶಿರವರಿಯುವೆ ಮುಂಬರೆ |
ಧುರದೊಳು ಕಟ್ಟಾಳು || 3 || 50 ||

**ಭೈರವಿ - ಏಕ**
ಮಿತಿಬೇಕತಿಯಹಮಿಕೆಗೆ | ಅ |
ಹತಿಯರಿಯದ ದುಷ್ಕೃತಿಗೆ ||
ಗತಿಗಾಣುವ ಕೊನೆಗಾಲ || ಬಂ |
ದಿತು ಬವರಕೆ ಬಾ ಖೂಳ || 1 ||
ಎನ್ನಯ ಬಲ ಪೌರುಷಕೆ | ಅ |
ತ್ಯೋನ್ನತಿ ಸಿರಿ ಸಂಪದಕೆ ||
ಇನ್ನುಳಿವೆಯ ನೀ ನೋಡು | ಶರ |
ಣೆನ್ನುತೆರಗಿ ಕ್ಷಮೆ ಬೇಡು || 2 || 52 ||

[ಯುದ್ಧ - ದುರ್ಗಮನ ಮರಣ]

**ಭಾಮಿನಿ**
ಸುಮನಸರು ಸುಮವರ್ಷಗರೆಯುತ |
ನಮಿಸೆ ಭಕ್ತ ಜನೌಘ ಜಯ ದು |
ರ್ಗಮ ಜಯದ 'ದುರ್ಗಾ' ಜನನಿ ಜಯವೆನುತ ನುತಿಸಿದುದು ||
ಕ್ಷಮೆಯ ತಾಳುತಲಿತ್ತು ವೇದವ |
ನಮಿತ ಫಲ ಮೂಲಗಳ ಕೊಡೆ ಸಂ |
ಭ್ರಮಿಸಿ ಶಾಕಂಬರಿ ಶತಾಕ್ಷಿಗೆ ಬೆಳಗಲಾರತಿಯ || 1 || 53 ||

**ವಾರ್ಧಕ**
ಹರಕೆಯಂಗೊಂಡಲ್ಲಿ ಧೌಮ್ಯರಂ ನಿಲಿಸುತ್ತ |
ತೆರಳಿದರ್ ಮತ್ಸ್ಯದೇಶಕೆ ಕಳೆದರಜ್ಞಾತ |
ಧುರಮುಖದಿ ವಿಜಯಮಂ ಹರಿಯನುಗ್ರಹದಿಂದ ಪಾಂಡುಜಾತರ್ ಪಡೆದರು ||
ಕರೆಸಿ ಧೌಮ್ಯರನಲ್ಲಿ ವರ ಪುರೋಹಿತರೆನಿಸಿ |
ಧರೆಯಾಳಿ ಪಾಂಡವರ್ ಪರಮ ಪದಕೈದಿದರ್ |
ದೊರೆ ಪರೀಕ್ಷಿತನಾಳ್ದ ಗುರುವನುಗ್ರಹ ಪಡೆದು ಕಲಿಯುಗಂ ಬರಲು ಮುಂದೆ || 1 || 54 ||

